12. ಈ ಕಾರ್ಯವನ್ನು ಯಾವ ದಿನಕ್ಕಾಗಿ ಮುಂದೂಡಲಾಗಿದೆ?	لِاَيِّ يَوْمٍ اُجِّلَتْ ﴿١٢﴾
13. ತೀರ್ಮಾನದ ದಿನಕ್ಕಾಗಿ.	لِيَوْمِ الْفَصْلِ ﴿١٣﴾
14. ಆ ತೀರ್ಮಾನದ ದಿನವೇನೆಂಬುದು ನಿಮಗೇನು ಗೊತ್ತು?	وَمَآ اَدْرٰىكَ مَا يَوْمُ الْفَصْلِ ﴿١٤﴾
15. ಅಂದು, ಸುಳ್ಳಾಗಿಸುವವರಿಗೆ ವಿನಾಶವಿದೆ.	وَيْلٌ يَّوْمَئِذٍ لِّلْمُكَذِّبِيْنَ ﴿١٥﴾
16. ನಾವು ಹಿಂದಿನವರನ್ನು ನಾಶಗೊಳಿಸಲಿಲ್ಲವೇ?	اَلَمْ نُهْلِكِ الْاَوَّلِيْنَ ﴿١٦﴾
17. ಆ ಬಳಿಕ ಅನಂತರದವರನ್ನೂ ನಾವು ಅದರ ಹಿಂದೆಯೇ ಕಳುಹಿಸುವೆವು.	ثُمَّ نُتْبِعُهُمُ الْاٰخِرِيْنَ ﴿١٧﴾
18. ನಾವು ಅಪರಾಧಿಗಳೊಂದಿಗೆ ಹೀಗೆಯೇ ವ್ಯವಹರಿಸುತ್ತೇವೆ.	كَذٰلِكَ نَفْعَلُ بِالْمُجْرِمِيْنَ ﴿١٨﴾
19. ಅಂದು ಸುಳ್ಳಾಗಿಸುವವರಿಗೆ ವಿನಾಶವಿದೆ.[4]	وَيْلٌ يَّوْمَئِذٍ لِّلْمُكَذِّبِيْنَ ﴿١٩﴾
20. ನಾವು ನಿಮ್ಮನ್ನು ಒಂದು ತುಚ್ಛ ದ್ರವದಿಂದ ಸೃಷ್ಟಿಸಲಿಲ್ಲವೇ?	اَلَمْ نَخْلُقْكُّمْ مِّنْ مَّآءٍ مَّهِيْنٍ ﴿٢٠﴾
21. ಮತ್ತು ಅದನ್ನು ಒಂದು ಸುರಕ್ಷಿತ ಸ್ಥಳದಲ್ಲಿರಿಸಲಿಲ್ಲವೇ?	فَجَعَلْنٰهُ فِيْ قَرَارٍ مَّكِيْنٍ ﴿٢١﴾
22. ಒಂದು ನಿಶ್ಚಿತ ಕಾಲಾವಧಿವರೆಗೆ-	اِلٰى قَدَرٍ مَّعْلُوْمٍ ﴿٢٢﴾
23. ನೋಡಿರಿ, ನಾವು ಹಾಗೆ ಮಾಡಲು ಸಮರ್ಥರಾಗಿದ್ದೆವು. ಆದುದರಿಂದ ನಾವು ಅತ್ಯುತ್ತಮ ಸಾಮರ್ಥ್ಯವುಳ್ಳವರಾಗಿದ್ದೇವೆ.	فَقَدَرْنَا ۖ فَنِعْمَ الْقٰدِرُوْنَ ﴿٢٣﴾
24. ಅಂದು ಸುಳ್ಳಾಗಿಸುವವರಿಗೆ ವಿನಾಶವಿದೆ.[5]	وَيْلٌ يَّوْمَئِذٍ لِّلْمُكَذِّبِيْنَ ﴿٢٤﴾
25. ನಾವು ಭೂಮಿಯನ್ನು ಶೇಖರಿಸಿಡುವಂತಹದ್ದಾಗಿ ಮಾಡಲಿಲ್ಲವೇ?	اَلَمْ نَجْعَلِ الْاَرْضَ كِفَاتًا ﴿٢٥﴾

ವಹಿಸಲು ಮುಂದೆ ತರಲಾಗುವುದು. ಅವರು ತಾನು ಅಲ್ಲಾಹನ ಸಂದೇಶವನ್ನು ಜನರಿಗೆ ತಲಪಿಸಿದ್ದೇನೆ ಎಂಬುದರ ಸಾಕ್ಷ್ಯ ವಹಿಸಬೇಕಾಗುವುದು. ಪವಿತ್ರ ಕುರ್‌ಆನಿನಲ್ಲಿ ಈ ವಿಷಯವನ್ನು ಅನೇಕ ಕಡೆ ಪ್ರಸ್ತಾಪಿಸಲಾಗಿದೆ.

4. ಲೋಕದಲ್ಲಿ ಅವರು ಯಾವ ಪರಿಣಾಮವನ್ನು ಎದುರಿಸಿದ್ದಾರೋ ಅಥವಾ ಎದುರಿಸಲಿದ್ದಾರೋ ಅದು ಅವರ ನಿಜವಾದ ಶಿಕ್ಷೆಯಲ್ಲ. ನಿಜವಾದ ಶಿಕ್ಷೆ ಅವರಿಗೆ ಫಲಿತಾಂಶದ ಆ ದಿನದಂದು ಎರಗುವುದು ಎಂದು ಹೇಳುವುದು ಇಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲಾಗಿರುವುದರ ಉದ್ದೇಶವಾಗಿದೆ.
5. ಅರ್ಥಾತ್- ಮರಣೋತ್ತರ ಜೀವನದ ಈ ಸುಸ್ಪಷ್ಟ ಸಾಕ್ಷಿ ಮುಂದಿರುವಾಗಲೂ ಇಂದು ಅದನ್ನು ನಿರಾಕರಿಸುತ್ತಿರುವ ಜನರು ಆ ದಿನ ವಿನಾಶಕ್ಕೀಡಾಗುವರು.

26. ಜೀವಂತವಿರುವವರಿಗಾಗಿಯೂ ಮೃತರಿಗಾಗಿಯೂ

أَحْيَاءً وَّأَمْوَاتًا ۝٢٦

27. ಮತ್ತು ಅದರಲ್ಲಿ ಉನ್ನತೋನ್ನತ ಪರ್ವತಗಳನ್ನು ಸ್ಥಿರವಾಗಿರಿಸ ಲಿಲ್ಲವೇ? ಮತ್ತು ನಿಮಗೆ ಸಿಹಿ ನೀರನ್ನು ಕುಡಿಸಲಿಲ್ಲವೇ?

وَّجَعَلْنَا فِيهَا رَوَاسِيَ شَامِخَاتٍ وَّأَسْقَيْنَاكُم مَّاءً فُرَاتًا ۝٢٧

28. ಅಂದು ಸುಳ್ಳಾಗಿಸುವವರಿಗೆ ವಿನಾಶವಿದೆ.[6]

وَيْلٌ يَوْمَئِذٍ لِّلْمُكَذِّبِينَ ۝٢٨

29. [7]ಈಗ, ನೀವು ಯಾವುದನ್ನು ಸುಳ್ಳೆಂದು ಹೇಳುತ್ತಿದ್ದಿರೋ ಅದರೆಡೆಗೇ ನಡೆಯಿರಿ-

انطَلِقُوا إِلَىٰ مَا كُنتُم بِهِ تُكَذِّبُونَ ۝٢٩

30. ಮೂರು ಕವಲುಗಳುಳ್ಳ ನೆರಳಿನ ಕಡೆಗೆ ನಡೆಯಿರಿ-[8]

انطَلِقُوا إِلَىٰ ظِلٍّ ذِي ثَلَاثِ شُعَبٍ ۝٣٠

31. (ಅದು) ತಂಪೊದಗಿಸುವಂತಹದೂ ಅಲ್ಲ, ಅಗ್ನಿ ಜ್ವಾಲೆಯಿಂದ ರಕ್ಷಿಸುವಂತಹದೂ ಅಲ್ಲ.

لَّا ظَلِيلٍ وَلَا يُغْنِي مِنَ اللَّهَبِ ۝٣١

32. ಆ ಬೆಂಕಿಯು ದೊಡ್ಡ ದೊಡ್ಡ ಭವನದಂತಹ ಕಿಡಿಗಳನ್ನು ಉಗುಳುವುದು.

إِنَّهَا تَرْمِي بِشَرَرٍ كَالْقَصْرِ ۝٣٢

33. ಅವು (ಜಿಗಿಯುತ್ತಿರುವ) ಹಳದಿ ಒಂಟೆಗಳೋ ಎಂಬಂತಿರುವುವು.

كَأَنَّهُ جِمَالَتٌ صُفْرٌ ۝٣٣

34. ಅಂದು ಸುಳ್ಳಾಗಿಸುವವರಿಗೆ ವಿನಾಶವಿದೆ.

وَيْلٌ يَوْمَئِذٍ لِّلْمُكَذِّبِينَ ۝٣٤

35. ಅದು, ಅವರೇನೂ ಮಾತನಾಡದ ದಿನವಾಗಿರುವುದು-

هَٰذَا يَوْمُ لَا يَنطِقُونَ ۝٣٥

36. ಮತ್ತು ಅವರಿಗೆ ಅಂದು ನೆಪಗಳನ್ನೊಡ್ಡುವ ಅನುಮತಿಯನ್ನೂ ನೀಡಲಾಗದು.[9]

وَلَا يُؤْذَنُ لَهُمْ فَيَعْتَذِرُونَ ۝٣٦

37. ಅಂದು ಸುಳ್ಳಾಗಿಸುವವರಿಗೆ ವಿನಾಶವಿದೆ.

وَيْلٌ يَوْمَئِذٍ لِّلْمُكَذِّبِينَ ۝٣٧

---

6. ಅರ್ಥಾತ್- ಯಾರು ದೇವನ ಯುಕ್ತಿ ಮತ್ತು ಮಹಿಮೆಗಳ ಈ ಚಮತ್ಕಾರಗಳನ್ನು ನೋಡಿದ ನಂತರವೂ ಪರಲೋಕದ ಸಾಧ್ಯತೆ ಮತ್ತು ಸತ್ಯತೆಯನ್ನು ನಿರಾಕರಿಸುತ್ತಾರೋ ಅವರು ಅದೇ ರೀತಿಯ ಭ್ರಮೆಯಲ್ಲಿರಬಯಸಿದರೆ ಇದ್ದು ಬಿಡಲಿ. ಎಲ್ಲವೂ ಅವರ ನಿರೀಕ್ಷೆಗೆ ವಿರುದ್ಧವಾಗಿ ನಡೆಯುವ ಆ ದಿನ, ನಮ್ಮ ಮೂರ್ಖತನದ ಮೂಲಕ ನಾವು ನಮಗೇ ನಷ್ಟ ಉಂಟು ಮಾಡಿದೆವು ಎಂದು ಅವರಿಗೆ ತಿಳಿದುಬರುವುದು.
7. ಪರಲೋಕಕ್ಕೆ ಆಧಾರಗಳನ್ನು ನೀಡಲಾದ ನಂತರ, ಈಗ ಆ ದಿನ ಬಂದು ಬಿಟ್ಟಾಗ ನಿಷೇಧಿಗಳು ಯಾವ ಪರಿಣಾಮವನ್ನೆದುರಿಸುವರು ಎಂದು ಹೇಳಲಾಗುತ್ತಿದೆ.
8. ನೆರಳು ಎಂದರೆ ಹೊಗೆಯ ನೆರಳಾಗಿದೆ. ದೊಡ್ಡ ಪ್ರಮಾಣದಲ್ಲಿ ಹೊಗೆಯೆದ್ದಾಗ ಅದು ಮೇಲೆ ಹೋಗಿ ಅನೇಕ ಶಾಖೆಗಳಲ್ಲಿ ವಿಭಜನೆಯಾಗುತ್ತದೆ. ಇದನ್ನೇ ಇಲ್ಲಿ ಮೂರು ಶಾಖೆಗಳು ಎಂದು ಹೇಳಲಾಗಿದೆ.
9. ಅರ್ಥಾತ್- ಅವರ ವಿರುದ್ಧ ಎಷ್ಟು ಪ್ರಬಲವಾದ ಆಧಾರ ಪ್ರಮಾಣಗಳೊಂದಿಗೆ ಮೊಕದ್ದಮೆಯನ್ನು ಸಾಬೀತು ಪಡಿಸಲಾಗುವುದೆಂದರೆ ಅವರು ಸ್ತಂಭೀಭೂತರಾಗಿ ಬಿಡುವರು. ಅವರಿಗೆ ತಮ್ಮ ಪರವಾಗಿ ಯಾವುದೇ ಸಬೂಬು ಹೇಳುವ ಅವಕಾಶವೇ ದೊರೆಯಲಾರದು.

38. ಇದು ತೀರ್ಪಿನ ದಿನ. ನಾವು ನಿಮ್ಮನ್ನೂ ನಿಮ್ಮ ಪೂರ್ವಜರನ್ನೂ ಒಟ್ಟುಗೂಡಿಸಿ ಬಿಟ್ಟಿದ್ದೇವೆ.	هَٰذَا يَوْمُ الْفَصْلِ جَمَعْنَاكُمْ وَالْأَوَّلِينَ ﴿٣٨﴾
39. ಈಗ ನಿಮಗೆ ಸಾಧ್ಯವಿದ್ದರೆ ನನ್ನ ವಿರುದ್ಧ ಏನಾದರೂ ಕುತಂತ್ರ ನಡೆಸಿ ನೋಡಿರಿ.	فَإِن كَانَ لَكُمْ كَيْدٌ فَكِيدُونِ ﴿٣٩﴾
40. ಅಂದು ಸುಳ್ಳಾಗಿಸುವವರಿಗೆ ವಿನಾಶವಿದೆ.	وَيْلٌ يَوْمَئِذٍ لِّلْمُكَذِّبِينَ ﴿٤٠﴾
41. ಧರ್ಮನಿಷ್ಠರು ಇಂದು ನೆರಳುಗಳಲ್ಲೂ ಚಿಲುಮೆಗಳಲ್ಲೂ ಇದ್ದಾರೆ-	إِنَّ الْمُتَّقِينَ فِي ظِلَالٍ وَعُيُونٍ ﴿٤١﴾
42. ಮತ್ತು ಅವರು ಇಷ್ಟಪಡುವ ಫಲಗಳು(ಅವರಿಗಾಗಿ ಸಿದ್ಧವಾಗಿವೆ).	وَفَوَاكِهَ مِمَّا يَشْتَهُونَ ﴿٤٢﴾
43. ನೀವು ಮಾಡುತ್ತಿದ್ದ ಕರ್ಮಗಳ ಪ್ರತಿಫಲವಾಗಿ ಸಂತೋಷದಿಂದ ತಿನ್ನಿರಿ ಮತ್ತು ಕುಡಿಯಿರಿ.	كُلُوا وَاشْرَبُوا هَنِيئًا بِمَا كُنتُمْ تَعْمَلُونَ ﴿٤٣﴾
44. ನಾವು ಸಜ್ಜನರಿಗೆ ಇಂತಹದೇ ಸತ್ಫಲವನ್ನು ನೀಡುತ್ತೇವೆ.	إِنَّا كَذَٰلِكَ نَجْزِي الْمُحْسِنِينَ ﴿٤٤﴾
45. ಅಂದು ಸುಳ್ಳಾಗಿಸುವವರಿಗೆ ವಿನಾಶವಿದೆ.	وَيْلٌ يَوْمَئِذٍ لِّلْمُكَذِّبِينَ ﴿٤٥﴾
46. ತಿನ್ನಿರಿ ಮತ್ತು ಅನುಭೋಗಿಸಿರಿ[10]- ಕೆಲವು ದಿನ ಮಾತ್ರ. ವಾಸ್ತವದಲ್ಲಿ ನೀವು ಅಪರಾಧಿಗಳಾಗಿದ್ದೀರಿ.	كُلُوا وَتَمَتَّعُوا قَلِيلًا إِنَّكُم مُّجْرِمُونَ ﴿٤٦﴾
47. ಅಂದು ಸುಳ್ಳಾಗಿಸುವವರಿಗೆ ವಿನಾಶವಿದೆ.	وَيْلٌ يَوْمَئِذٍ لِّلْمُكَذِّبِينَ ﴿٤٧﴾
48. ಇವರೊಡನೆ (ಅಲ್ಲಾಹನ ಮುಂದೆ) ತಲೆಬಾಗಿರಿ ಎಂದಾಗ ಇವರು ತಲೆಬಾಗುವುದಿಲ್ಲ.	وَإِذَا قِيلَ لَهُمُ ارْكَعُوا لَا يَرْكَعُونَ ﴿٤٨﴾
49. ಅಂದು ಸುಳ್ಳಾಗಿಸುವವರಿಗೆ ವಿನಾಶವಿದೆ.	وَيْلٌ يَوْمَئِذٍ لِّلْمُكَذِّبِينَ ﴿٤٩﴾
50. ಇನ್ನು ಇದರ (ಕುರ್‌ಆನಿನ) ಅನಂತರ ಇನ್ನಾವ ವಚನದ ಮೇಲೆ ತಾನೇ ಇವರು ವಿಶ್ವಾಸವಿರಿಸುವರು?	فَبِأَيِّ حَدِيثٍ بَعْدَهُ يُؤْمِنُونَ ﴿٥٠﴾

10. ಮಾತನ್ನು ಕೊನೆಗೊಳಿಸುತ್ತಾ, ಮಕ್ಕಾದ ಸತ್ಯನಿಷೇಧಿಗಳನ್ನಷ್ಟೇ ಅಲ್ಲದೆ ವಿಶ್ವದ ಸಮಸ್ತ ಸತ್ಯನಿಷೇಧಿಗಳನ್ನು ಉದ್ದೇಶಿಸಿ ಈ ಮಾತು ಹೇಳಲಾಗುತ್ತಿದೆ.